ಎಂ.ವಿ.ಸಿ. 1461/2023

ಪಿ .ಡಬ್ಲ್ಯೂ-1

**ದಿನಾಂಕಃ 28-03-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಸ್. ಸಿ. ಕೆ. ವಕೀಲರಿಂದಃ**

ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಸಿ.ಆರ್. ನಂಃ 104/2022 ರ ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು **ನಿಪಿ-1** ಎಂದು, ದಿನಾಂಕಃ 20-05-2022 ರ ದೂರಿನ ದೃಢೀಕೃತ ನಕಲನ್ನು **ನಿಪಿ-2** ಎಂದು, ದಿಃ 30-04-2022 ರ ಸ್ಥಳ ಪಂಚನಾಮೆಯ ದೃಢೀಕೃತ ನಕಲನ್ನು **ನಿಪಿ-3** ಎಂದು, ದಿಃ 21-05-2022 ರ ಜಪ್ತು ಪಂಚನಾಮೆಯ ದೃಢೀಕೃತ ನಕಲನ್ನು **ನಿಪಿ-4** ಎಂದು, 2 ಗಾಯದ ಪ್ರಮಾಣ ಪತ್ರಗಳನ್ನು **ನಿಪಿ-5 ಹಾಗೂ 6** ಎಂದು, ಐ. ಎಂ. ವಿ. ವರದಿಯ ದೃಢೀಕೃತ ನಕಲನ್ನು **ನಿಪಿ-7** ಎಂದು, ಅಂತಿಮ ವರದಿಯ ದೃಢೀಕೃತ ನಕಲನ್ನು **ನಿಪಿ-8** ಎಂದು, 43 ವೈದ್ಯಕೀಯ ಬಿಲ್ಲುಗಳನ್ನು ಒಟ್ಟಾಗಿ **ನಿಪಿ-9** ಎಂದು, ಬಿಡುಗಡೆ ಸಾರಾಂಶವನ್ನು **ನಿಪಿ-10** ಎಂದು, 12 ವೈದ್ಯಕೀಯ ಸಲಹಾ ಚೀಟಿಗಳನ್ನು ಹಾಗೂ ಪ್ರಯೋಗಾಲಯದ ವರದಿಯನ್ನು ಒಟ್ಟಾಗಿ **ನಿಪಿ-11** ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯವನ್ನು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 28-03-2025.

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ

ಹಿರೇಕೆರೂರು